ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಸ್ಪೇ (**Lok**)ನಂಃ **08/2015**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಗೌಡ | ಪಿ.ಡಬ್ಲ್ಯೂ | 1 |
| ತಂದೆಯ ಹೆಸರು | : | ಭೀಮನಗೌಡ ಪಾಟೀಲ್ | ಸಿ.ಡಬ್ಲ್ಯೂ | 1 |
| ವಯಸ್ಸು | : | 63 ವರುಷ | | |
| ಉದ್ಯೋಗ | : | ನಿವೃತ್ತ ಪೋಲೀಸ್ ಉಪಾಧೀಕ್ಷಕರು | | |
| ವಾಸ ಸ್ಥಳ | : | ಹಾವೇರಿ | | |

ದಿನಾಂಕಃ 12.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.
ಮುಖ್ಯ ವಿಚಾರಣೆ ಃ ವಿಶೇಷ ಅಭಿಯೋಜಕರಿಂದ ಃ

ಮಾರ್ಚ್ 2012 ರಿಂದ ನವಂಬರ್ 2013 ರವರೆಗೆ ಪೋಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ, ದಾವಣಗೆರೆ ವಿಭಾಗದಲ್ಲಿ ಕೆಲಸ ಮಾಡಿರುತ್ತೇನೆ. ದಾವಣಗೆರೆ ಜಿಲ್ಲೆ ನನ್ನ ವ್ಯಾಪ್ತಿಗೆ ಬರುತ್ತದೆ.

ಈ ಪ್ರಕರಣದ ಆರೋಪಿ ತನ್ನ ಬಲ್ಲಮೂಲ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಗಳಿಸಿರುತ್ತಾನೆ ಅಂತಾ ಮಾಹಿತಿ ಬಂದಿರುತ್ತದೆ. ಆ ಸಮಯದಲ್ಲಿ ಆರೋಪಿ ಪ್ರಭಾರೆ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ನೇರಳಗಿ ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಿದ್ದ. ಈ ಮೇಲೆ ಹೇಳಿದ ಮಾಹಿತಿಯನ್ನು ಆಧಾರಿಸಿ ಅವನ ಆದಾಯದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಅಂದರೆ ಅವನ ಸೋರ್ಸ್ ವರದಿಯನ್ನು ತಯಾರಿಸಿರುತ್ತೇನೆ. ದಿಃ 23/05/2013 ರಂದು ಲೋಕಾಯಕ್ತ ಎಸ್ ಪಿ ಅವರ ಆದೇಶದ ಪ್ರಕಾರ ಮೊಕದ್ದಮೆ ದಾಖಲಿಸಲು ಆದೇಶ ಮಾಡಿದ್ದು, ಅದನ್ನು 12/30 ಗಂಟೆಗೆ ದಾವಣಗೆರೆ ಗುನ್ನ ನಂ.19/2013 ರ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ಜಾರಿ ಮಾಡಿದೆ. ಚಾ.ಸಾ.2 ಮತ್ತು 3 ಇವರಿಗೆ ಪಂಚರಾಗಿ ಬರಲು ಒಂದು ಪತ್ರ ಬರೆದಿರುತ್ತೇನೆ. ಚಾ.ಸಾ.2, 3, 6 ಮತ್ತು 7 ರವರನ್ನು ಸಹ ಶೋಧನಾ ಕಾರ್ಯಕ್ರಮದಲ್ಲಿ ಸಹಕರಿಸಬೇಕು ಅಂತಾ ಪತ್ರ ಬರೆದಿರುತ್ತೇನೆ. ಸದರಿಯವರು ಅದೇ ದಿವಸ ಹಾಜರಾಗಿದ್ದು, ನಾನು ಅವರಿಗೆ ದಿಃ 24/05/2013 ರಂದು ಬೆಳಿಗ್ಗೆ ನಮ್ಮ ಕಛೇರಿಗೆ ಬರಲು ತಿಳಿಸಿದೆ. ಮತ್ತು ಪ್ರಕರಣದ ಬಗ್ಗೆ ಅವರಿಗೆ ಕೆಲವೊಂದು ಸೂಚನೆಗಳನ್ನು ಕೊಟ್ಟೆನು. ಬಂದ ವಾರಂಟ್ಗಳಲ್ಲಿ ಒಂದನ್ನು ನನ್ನ ಬಳಿ ಇಟ್ಟುಕೊಂಡೆ ಇನ್ನೊಂದನ್ನು ಾ.ಸಾ.20 ಇವರ ಕೈಗೆ ಕೊಟ್ಟೆ. ದಿಃ 24/05/2013 ರಂದು ಬೆಳಿಗ್ಗೆ 4/00 ಗಂಟೆಗೆ ನಾನು ಮತ್ತು ಸಿಬ್ಬಂದಿಯವರಾದ

ಮಂಜುನಾಥ, ಗಿರೀಶ ಇವರನ್ನು ನಮ್ಮ ಜೊತೆಗೆ ಇಟ್ಟುಕೊಂಡು, ಚಾ.ಸಾ.27 ಅವರು ತಮ್ಮ ಸಿಬ್ಬಂದಿಯನ್ನು ಸಹ ನಮ್ಮ ಜೊತೆಗೆ ಕಳುಹಿಸಿಕೊಟ್ಟರು. ಬೆಳಿಗ್ಗೆ 5/30 ಕ್ಕೆ ದೇವನಹಳ್ಳಿಯ ತಹಶೀಲ್ದಾರ್ ಆಫೀಸ್ ಬಳಿ ವಾಹನ ನಿಲ್ಲಿಸಿ, ಜಗಳೂರಿನ ಬಡಾವಣೆಯ ಆರೋಪಿಯ ಮನೆಗೆ ಹೋದೆವು. ಆರೋಪಿಯ ಮನೆಯ ಹೆಸರು ಪೂರ್ಣಚಂದ್ರ ಇರುತ್ತದೆ. ನಾವು ಆರೋಪಿಯ ಮನೆಗೆ ಹೋಗಿ ಕಾಲಿಂಗ್ ಬೆಲ್ ಮಾಡಿದಾಗ ಮದ್ಯ ವಯಸ್ಸಿನ ಹೆಣ್ಣು ಮಗಳು ಬಾಗಿಲು ತೆಗೆದಿರುತ್ತಾಳೆ. ಆಕೆಯ ಹೆಸರು ರೇಣುಕಾ ಅಂತಾ ತಿಳಿಸಿರುತ್ತಾಳೆ. ಮತ್ತು ಆರೋಪಿಯನ್ನು ವಿಚಾರಿಸಲು ಆರೋಪಿ ದಾವಣಗೆರೆಯಲ್ಲಿ ಒಂದು ರೂಂ ಮಾಡಿಕೊಂಡು ಇರುವುದಾಗಿ ಹೇಳಿದಳು. ಸದರಿ ರೇಣುಕಾ ಆರೋಪಿಯ ಹೆಂಡತಿ ಇದ್ದು, ಆರೋಪಿಯ ಮಗ ಮತ್ತು ಆರೋಪಿಯ ಅಕ್ಕ ಮನೆಯಲ್ಲಿ ಇದ್ದರು. ಸದರಿಯವರೆಲ್ಲರಿಗೂ ನನ್ನ ಹಾಗೂ ನಮ್ಮ ಸಿಬ್ಬಂದಿಯವರನ್ನು ಪರಿಚಯ ಮಾಡಿಕೊಂಡೆವು. ಮತ್ತು ಸದರಿಯವರಿಗೆ ಪ್ರಕರಣದ ವಿಷಯ ತಿಳಿಸಿ ಮತ್ತು ಮಾನ್ಯ ನ್ಯಾಯಾಲಯದ ವಾರಂಟನ್ನು ತೋರಿಸಿದೆ. ಮತ್ತು ಅದನ್ನು ಅವರಿಗೆ ಜಾರಿ ಮಾಡಿದೆ ಮತ್ತು ಅವರು ಅದನ್ನು ಓದಿ ಸಹಿ ಮಾಡಿರುತ್ತಾರೆ. ನಂತರ ನಾವು ಮತ್ತು ನಮ್ಮ ಸಿಬ್ಬಂದಿಯವರು ನಮ್ಮ ನಮ್ಮ ಅಂಗ ಜಪ್ತು ಮಾಡಿಕೊಂಡೆವು. ನಂತರ ಪಂಚರ ಸಮಕ್ಷಮ ಆರೋಪಿಯ ಮನೆಯ ಶೋಧನಾ ಕೆಲಸ ಶುರು ಮಾಡಿದೆವು. ನಾವು ಪಂಚನಾಮೆಯನ್ನು ಪಂಚರ ಸಮಕ್ಷಮ ಬೆಳಿಗ್ಗೆ 6/30 ರಿಂದ ಸಂಜೆ 5/30 ರವರೆಗೆ ಮಾಡಿದ್ದೇವೆ. ನಾನು ಈಗ ಪ್ರ.ವ.ವರದಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.1 ಅಂತಾ ಗುರುತಿಸಲಾಯಿತು. ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.1 ಅ ಅಂತಾ ಗುರುತಿಸಲಾಯಿತು. ನಾನು ಈಗ ಶೋಧನಾ ಪಂಚನಾಮೆ ನೋಡುತ್ತಿದ್ದು, ಅದನ್ನು ನಿ.ಪಿ.2 ಅಂತಾ ಗುರುತಿಸಲಾಯಿತು. ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.2 ಅ ಅಂತಾ ಗುರುತಿಸಲಾಯಿತು. ಮತ್ತು ಪಂಚನಾಮೆಯ ಮೇಲೆ ಪಂಚರು ಸಹ ಸಹಿ ಮಾಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಆರೋಪಿಯು ಸಹ ಬಂದಿದ್ದು, ಆರೋಪಿಗೆ ಪಂಚನಾಮೆಯ ಪ್ರತಿಯನ್ನು ಕೊಟ್ಟಿರುತ್ತೇನೆ. ಮತ್ತು ಪಂಚನಾಮೆಯ ಕಾಲಕ್ಕೆ ಆದ ವಿದ್ಯಾಮಾನಗಳ ಬಗ್ಗೆ ವೀಡಿಯೋ ಚಿತ್ರೀಕರಣ ಮಾಡಿರುತ್ತೇವೆ. ನಂತರ ರಾತ್ರಿ 8/00 ಗಂಟೆಗೆ ನನ್ನ ಕಛೇರಿಗೆ ವಾಪಾಸ್ ಬಂದೆವು. ವಶಪಡಿಸಿಕೊಂಡ ದಾಖಲೆಗಳನ್ನು ಪಿಎಫ್ ನಲ್ಲಿ ಅಳವಡಿಸಿಕೊಂಡಿರುತ್ತೇವೆ. ಹಾಗೂ ಆರೋಪಿಯ ಮನೆಯಲ್ಲಿ ಮಾಡಿದ ವಿದ್ಯಾಮಾನಗಳ ವೀಡಿಯೋ ಸಿಡಿಯನ್ನು ಒಂದು ಕವರ್ ನಲ್ಲಿ ಹಾಕಿ ಸೀಲ್ ಮಾಡಿರುತ್ತೇನೆ. ಹಾಗೂ ಪುನಃ ಪಂಚರಿಗೆ ದಿಃ 25/05/2013 ರಂದು ಬೆಳಿಗ್ಗೆ 10/00 ಗಂಟೆಗೆ ಹಾಜರಾಗಲು ಸೂಚನೆ ನೀಡಿರುತ್ತೇನೆ. ದಿಃ 25/05/2013 ರಂದು ಪಂಚರ ಸಮಕ್ಷಮ ಆರೋಪಿ ದಾವಣಗೆರೆಯಲ್ಲಿ ಇದ್ದ ರೂಮಿನ ಪಂಚನಾಮೆಯನ್ನು ಮುಂಜಾನೆ 11/30 ರಿಂದ ಮದ್ಯಾಹ್ನ 1/00 ಗಂಟೆಯವರೆಗೆ

ಮಾಡಿರುತ್ತೇನೆ. ನಾನು ಈಗ ಸದರಿ ಪಂಚನಾಮೆ ನೋಡುತ್ತಿದ್ದು, ಅದನ್ನು ನಿ.ಪಿ.3 ಅಂತಾ ಗುರುತಿಸಲಾಯಿತು. ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.3 ಅ ಅಂತಾ ಗುರುತಿಸಲಾಯಿತು. ಮತ್ತು ಪಂಚನಾಮೆಗಳನ್ನು ಮತ್ತು ಪಿಎಫ್ ಗಳನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಮತ್ತು ಆರೋಪಿ ಹಾಗೂ ಅವನ ಹೆಂಡತಿ ಮಕ್ಕಳ ಹೆಸರಿನಲ್ಲಿ ಇರುವ ಬ್ಯಾಂಕ್ ಖಾತೆಗಳ ವಿವರಣೆಯನ್ನು ನೀಡಲು, ಕೆನರಾ ಬ್ಯಾಂಕ್, ಪ್ರಗತಿ ಗ್ರಾಮೀಣ ಬ್ಯಾಂಕ್ ಗಳಿಗೆ ಪತ್ರ ಬರೆದಿರುತ್ತೇನೆ. ಮತ್ತು ಸಂಜೆ 4/00 ಗಂಟೆಗೆ ಆರೋಪಿಯ ಹೇಳಿಕೆಯನ್ನು ಬರೆದುಕೊಂಡಿರುತ್ತೇನೆ. ಮತ್ತು ಅದೇ ರೀತಿ ಚಾ.ಸಾ.2, 3, 6 ಮತ್ತು ಚಾ.ಸಾ.7 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 28/05/2013 ರಂದು ಮುಖ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ, ದಾವಣಗೆರೆ ಇವರಿಗೆ ಆರೋಪಿಯ ಸೇವಾ ಮಾಹಿತಿ ಮತ್ತು ವೇತನಾ ವಿವರ ಮತ್ತು ಅಸೆಟ್ಸ ಅಂಡ್ ಲಯಾಬಿಲಿಟೀಸ್ ಅನ್ನು ನೀಡಲು ಪತ್ರ ಬರೆದಿರುತ್ತೇನೆ. ಹಿರಿಯ ಉಪನೋಂದಣಾಧಿಕಾರಿ, ಜಗಳೂರು ಇವರಿಗೆ ಆರೋಪಿಯ ಮನೆ ಮತ್ತು ನಿವೇಶನಗಳ ಬಗ್ಗೆ ಮಾಹಿತಿ ನೀಡಲು ಪತ್ರ ಬರೆದಿರುತ್ತೇನೆ. ಭರಮ ಸಮುದ್ರ ಗ್ರಾಮದ 8/3 ರಲ್ಲಿ 3 ಎಕರೆ 18 ಗುಂಟೆ ಜಮೀನಿನ ಬಗ್ಗೆ ದಾಖಲೆಗಳನ್ನು ಕೇಳಿ ಪತ್ರ ಬರೆದಿರುತ್ತೇನೆ. ಮತ್ತು ಇತರ ಆಸ್ತಿಗಳು ಏನಾದರೂ ಇದ್ದರೆ ಅದರ ಬಗ್ಗೆ ಮಾಹಿತಿ ಕೇಳಿರುತ್ತೇನೆ. ಪೌರಾಯುಕ್ತರು, ಪುರಸಭೆ, ಜಗಳೂರು ಇವರಿಗೆ ಪತ್ರ ಬರೆದು ಆರೋಪಿಯ ಮನೆ, ನಿವೇಶನ ಮತ್ತು ಕಂದಾಯ ವಿವರಗಳನ್ನು ನೀಡಲು ಪತ್ರ ಬರೆದಿರುತ್ತೇನೆ. ಸಹಾಯಕ ಕಾರ್ಯಪಾಲಕರು ಬೆಸ್ಕಾಂ ಇವರಿಗೆ ಆರೋಪಿಯ ಜಗಳೂರು ಮನೆಯ ವಿದ್ಯುತ್ ಸಂಪರ್ಕ ಹಾಗೂ ಅದಕ್ಕೆ ಸಲ್ಲಿಸಿದ ಶುಲ್ಕಗಳ ಬಗ್ಗೆ ವಿವರ ಕೇಳಿರುತ್ತೇನೆ.

ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ನ್ಯಾಯಾಧೀಶರು, ವಿಶೇಷ ನ್ಯಾಯಾಲಯ,
ದಾವಣಗೆರೆ.